# ವಿಶ್ವನಂದಿನಿ ಲೇಖನಮಾಲೆ — 90

## ಸಾರಾಮೃತಯುಕ್ತವಾದ ಶ್ರೀ ಹರಿಭಕ್ತಿಸಾರ ನಲವತ್ತೈದನೆಯ ಪದ್ಯ

ವಾಲ್ಮೀಕಿ, ಕುಚೇಲ, ಧ್ರುವ, ವಿಭೀಷಣ ಇವರೆಲ್ಲರೂ ಭಗವದ್ಭಕ್ತರ ಮುಖಾಂತರ ಭಗವಂತನ ಸಂಪರ್ಕಕ್ಕೆ ಬಂದು ಅವನನ್ನು ಭಜಿಸಿ ಅವನ ಅನುಗ್ರಹವನ್ನು ಪಡೆದವರು. ಆದರೆ, ತನ್ನನ್ನು ಮರೆತು, ಹರಿದಾಸರಿಂದ ದೂರವಾಗಿ ಬದುಕುವ ಯೋಗ್ಯಜೀವರನ್ನೂ ಭಗವಂತ ಕಡೆಗಣಿಸುವದಿಲ್ಲ, ತಾನೇ ಮುಂದಾಗಿ ಬಂದು ಅವರನ್ನು ರಕ್ಷಿಸುತ್ತಾನೆ, ಅವರನ್ನು ಸನ್ಮಾರ್ಗದಲ್ಲಿ ನಡೆಸುತ್ತಾನೆ ಎಂಬ ತತ್ವವನ್ನು ಅಜಾಮಿಳನ ವೃತ್ತಾಂತದ ಮುಖಾಂತರ ದಾಸರು ಚಿಂತಿಸುತ್ತಾರೆ —

**ಶಿವಶಿವಾ ನೀ ಮಾಡಿದುಪಕಾ-**
**ರವನು ಮರೆತವರುಂಟೆ ಪಾಪದಿ**
**ನವೆದಜಾಮಿಳಗೊಲಿದು ಪ್ರಾಣವಿಯೋಗಕಾಲದಲಿ ।**
**ಜವನವರ ಕೈಗೊಪ್ಪಿಸದೆ ಕಾ-**
**ದವನು ನೀ ಮಾಧವನು ಮಿಕ್ಕಾ-**
**ದವರಿಗುಂಟೇ ಕರುಣ ರಕ್ಷಿಸು ನಮ್ಮನನವರತ ॥ ೪೫ ॥**

‘ನೀ ಮಾಡಿದ ಉಪಕಾರವನು’
ಮಹಾಪಾಪಿಷ್ಠನಾಗಿದ್ದ ಅಜಾಮಿಳನನ್ನು
ರಕ್ಷಿಸುವದರ ಮುಖಾಂತರ ಸಕಲ ಸಜ್ಜನರಿಗೆ
ನಾಮಸ್ಮರಣದ ಮಾಹಾತ್ಮ್ಯವನ್ನು ತೋರಿಸಿಕೊಟ್ಟ
ನಿನ್ನ ಅನುಗ್ರಹವನ್ನು
‘ಮರೆತವರುಂಟೇ?’ ಮರೆತ ಭಕ್ತರಿದ್ದಾರೆಯೇ ?
ಮರೆಯಲು ಸಾಧ್ಯವೇ ?
‘ಶಿವಶಿವಾ!’ ಅಕಸ್ಮಾತ್ ಪರಮಾತ್ಮನ
ನಾಮಸ್ಮರಣದ ಮಾಹಾತ್ಮ್ಯವನ್ನು ಮರೆತರೆ
ಉಂಟಾಗುವ ಅನರ್ಥವನ್ನು
ಊಹಿಸಿಕೊಳ್ಳುತ್ತಿರುವ, ಕೇವಲ ಊಹೆಯಿಂದಲೇ
ಭೀತರಾದ ದಾಸರ ಮುಖದಿಂದ ಹೊರಟ
ಉದ್ಗಾರವಿದು.

ನಾಮಸ್ಮರಣೆಯಿಂದ ಸರ್ವಪಾಪಗಳ ವಿನಾಶವಾಗುತ್ತದೆ. ನಾಮಸ್ಮರಣೆಯಿಂದ ಗಂಗಾದಿ ತೀರ್ಥಗಳಿಂದಲೂ ದೊರೆಯದ ಪುಣ್ಯ ಒದಗಿಬರುತ್ತದೆ. ನಾಮಸ್ಮರಣೆಯಿಂದ ಭಗವಂತ ಪ್ರೀತನಾಗುತ್ತಾನೆ. ನಾಮಸ್ಮರಣೆಯಿಂದ ಮೋಕ್ಷವೇ ದೊರೆಯುತ್ತದೆ. ಅಂಥಾ

ನಾಮಸ್ಮರಣೆಯನ್ನು ಮರೆತಲ್ಲಿ ಉನ್ನತಿಯೇ ಇಲ್ಲ. ತೊರೆದಲ್ಲಿ ಸಾಧನೆಯೇ ಇಲ್ಲ.

ನಾಮಸ್ಮರಣದ ಮಾಹಾತ್ಮ್ಯವನ್ನು ಜಗತ್ತಿನಲ್ಲಿ ಪ್ರಕಟಿಸಿದ ಅಜಾಮಿಳನ ವೃತ್ತಾಂತವನ್ನು ಚಿಂತಿಸುತ್ತಾರೆ —
'ಪಾಪದಿ' ಪರಸ್ತ್ರೀಸಂಪರ್ಕ, ಶೂದ್ರಸ್ತ್ರೀಸಂಪರ್ಕ, ಪತ್ನೀತ್ಯಾಗ, ಪಿತೃಮಾತೃತ್ಯಾಗ, ಸ್ವಾಧ್ಯಾಯವರ್ಜನ, ಸದಾಚಾರವರ್ಜನ, ಅಭಕ್ಷ್ಯಭಕ್ಷಣ, ಕಳ್ಳತನ, ಸುರಾಪಾನ, ಬ್ರಹ್ಮಹತ್ಯೆ ಮುಂತಾದ ಮಹತ್ತರಪಾಪಗಳಿಂದ
'ನವೆದ' ವಿನಾಶವಾಗಿ ಹೋಗಿದ್ದ, ಆದ್ದರಿಂದಲೇ ಕಲ್ಪಕಲ್ಪಗಳವರೆಗೆ ನರಕದ ಕೂಪದಲ್ಲಿ ಕೊಳೆಯಬೇಕಾಗಿದ್ದ
'ಅಜಾಮಿಳಗೆ' ಅಜಾಮಿಳನಿಗೆ
'ಪ್ರಾಣವಿಯೋಗಕಾಲದಲಿ' ದೇಹದಿಂದ ಪಂಚಪ್ರಾಣಗಳು ವಿಯೋಗಗೊಳ್ಳುವ ಕಾಲದಲ್ಲಿ ಅರ್ಥಾತ್ ಸಾಯುವ ಕಟ್ಟ ಕಡೆಯ ಕ್ಷಣದಲ್ಲಿ
'ಒಲಿದು' ಯಮದೂತರನ್ನು ಕಂಡು ಭಯಗ್ರಸ್ತನಾಗಿ ತನ್ನ ಪ್ರೇಮದ ಮಗ ನಾರಾಯಣನನ್ನು ಕೂಗುತ್ತಾ,

ಕೂಗುವಾಗ ನಾರಾಯಣ ಎಂಬ ಶಬ್ದದಿಂದ ನಿನ್ನನ್ನು ಸ್ಮರಣೆಗೆ ತಂದು ಕೊಂಡದ್ದರಿಂದ ಒಲಿದು ‘ಜವನವರ’ ಕೈಗೊಪ್ಪಿಸದೆ ಯಮದೂತರಿಗೆ ದೊರಕದ ಹಾಗೆ ಮಾಡಿ
‘ಕಾದವನು ಮಾಧವನು ನೀ’ ಕಾದ ಮಾಧವನು ನೀನು, ರಕ್ಷಣೆ ಮಾಡಿದ ಲಕ್ಷ್ಮೀಪತಿ ನೀನು.
‘ಮಿಕ್ಕಾದವರಿಗುಂಟೇ ಕರುಣ?’

ಕೋಟಿ ಕೋಟಿ ವರ್ಷಗಳಾದರೂ ಉತ್ಥಾನವಾಗದಂತಹ ನರಕದಲ್ಲಿ ಬೀಳುವಷ್ಟು ಘೋರ ಪಾಪಗಳನ್ನು ಮಾಡಿದ್ದ ಅಜಾಮಿಳ ಕೇವಲ ಸಾಯುವ ಸಂದರ್ಭದಲ್ಲಿ ನಿನ್ನ ನಾಮಸ್ಮರಣೆ ಮಾಡಿದ್ದಕ್ಕಾಗಿ ನೀನು ಅವನನ್ನು ರಕ್ಷಣೆ ಮಾಡಿದಿ, ಉಳಿದ ಯಾವ ದೇವತೆಗಳು ಯಾವ ಋಷಿಗಳು ಹೀಗೆ ರಕ್ಷಣೆ ಮಾಡಿದ್ದಾರೆ? ನೂರಾರು ವರ್ಷಗಳ ಕಾಲ ತಪಸ್ಸಿನಿಂದ ಸಂತೋಷಪಡಿಸಿದರೆ ರುದ್ರಾದಿ ದೇವತೆಗಳು ವರಪ್ರದರಾಗುತ್ತಾರೆ. ಹತ್ತಾರು ವರ್ಷಗಳ ನಿರಂತರ ಸೇವೆಗೈದರೆ ಋಷಿಮುನಿಗಳು ಇಷ್ಟಾರ್ಥಪ್ರದರಾಗಿ ಅನುಗ್ರಹ ಮಾಡುತ್ತಾರೆ. ಸೇವೆ ಮಾಡುವ ಸಂದರ್ಭದಲ್ಲಿ ಸಣ್ಣ ಲೋಪ ನಡೆದರೂ ಶಾಪವನ್ನಿತ್ತು ಬಿಡುತ್ತಾರೆ. ಇನ್ನು

ಪಾಪಿಷ್ಠರಾದ ಜನರ ಬಳಿಯಂತೂ ಅವರು ಬರುವದೇ ಇಲ್ಲ. ಇಷ್ಟೆಲ್ಲದರ ಜತೆಗೆ ಅವರು ನೀಡುವದು ವರಗಳನ್ನು, ಸುಖವನ್ನು ಮಾತ್ರ. ನರಕದಿಂದ ನಮ್ಮನ್ನು ರಕ್ಷಣೆ ಮಾಡುವದಿಲ್ಲ. ಆದರೆ ನೀನು ಮಹಾಪಾಪಿಷ್ಠನಾದ ಅಜಾಮಿಳ ಮಾಡಿದ ಒಂದೇ ಒಂದು ನಾಮಸ್ಮರಣೆಗೆ ಒಲಿದೆ. ನರಕದ ಭಯದಿಂದ ಅವನನ್ನು ರಕ್ಷಿಸಿದೆ. ಆಯುಷ್ಯ ಮುಗಿದಿದ್ದ ಅವನಿಗೆ ಮತ್ತೆ ಮೂರು ವರ್ಷಗಳ ಆಯುಷ್ಯವನ್ನು ನೀಡಿ ಗಂಗಾಸ್ನಾನಾದಿಗಳಿಂದ ಅವನ ಸಕಲ ಪಾಪವನ್ನು ಪರಿಹಾರ ಮಾಡಿಸಿದೆ. ಕಡೆಯಲ್ಲಿ ಶಾಶ್ವತಾನಂದದ ಮೋಕ್ಷವನ್ನು ಕರುಣಿಸಿದೆ.

ಹೀಗಾಗಿ ನೀನೇ ಕರುಣಾಳು. ಉಳಿದವವರಲ್ಲಿ ನಿನ್ನಲ್ಲಿರುವಷ್ಟು ಕರುಣೆಯಿಲ್ಲ. ಮಹಾಕರುಣಾಸಮುದ್ರನಾದವನು ನೀನು.

‘ರಕ್ಷಿಸು ನಮ್ಮನನವರತ’

ಒಡೆಯಾ ! ಅಜಾಮಿಳನನ್ನು ಪಾಪಕೂಪದಿಂದ ರಕ್ಷಿಸಿದ ಹಾಗೆ ನಮ್ಮನ್ನು ರಕ್ಷಿಸು. ಅಜಾಮಿಳನಿಗೆ

ಸಾಯುವ ಸಂದರ್ಭದಲ್ಲಿ ನಾಮಸ್ಮರಣೆಯನ್ನಿತ್ತ ಹಾಗೆ ನಿನ್ನ ಭಕ್ತರಾದ ನಮಗೂ ಸಾಯುವ ಕ್ಷಣಕೆ ನಿನ್ನ ಗುಣಮಾಹಾತ್ಮ್ಯದ ಚಿಂತನೆಯನ್ನು ನೀಡು. ನೀಡಿ ಆ ಮುಖಾಂತರ ಮೋಕ್ಷವನ್ನು ಕರುಣಿಸಿ ನಮ್ಮನ್ನು ರಕ್ಷಿಸು ॥ ೪೫ ॥

— ವಿಷ್ಣುದಾಸ ನಾಗೇಂದ್ರಾಚಾರ್ಯ

# <u>ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ</u>

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

**Vishnudasa Nagendracharya**

No. 2, “Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491